ನಮ್ಮ ತಜ್ಞರು ಲೆಕ್ಕಚಾರಮಾಡಿ ಆದಾಯ ಎಷ್ಟು ಬರುತ್ತದೆ ಖರ್ಚು ಎಷ್ಟು ಬರುತ್ತದೆ ಎನ್ನುವುದನ್ನು ಲೆಕ್ಕಹಾಕಿ ತಾನೆಕಳುಹಿಸುವುದು ? ಕಡಿಮೆ ಆದಮೇಲೆ ನಷ್ಟವಾಗುತ್ತದೆ ಆದ್ದರಿಂದ ಇದರ ಬಗ್ಗೆ ನಮ್ಮ ಸರ್ಕಾರದವರು ಅಗ್ರಿಕಲ್ಚರ್ ಪ್ರೈಸ್ ಕಮಿಷನ್ ಜೊತೆಯಲ್ಲಿ ಏನಾದರೂ ವ್ಯವಹಾರಮಾಡಿದ್ದಾರೆಯೆ

ಶ್ರೀ ಎಚ್. ಸಿ. ಶ್ರೀಕಂಠಯ್ಯ. ಪ್ರತಿವರ್ಷ ನಾವು ಕಳುಹಿಸಿಕೊಡುತ್ತಲೇ ಇರುತ್ತೇವೆ. ಪ್ರತಿ ವರ್ಷ ಅಧಿಕಾರಿಗಳು ವ್ಯವಸಾಯ ಇಲಾಖೆಯ ಅಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸುತ್ತಾರೆ ಮತ್ತು ನಮ್ಮ ಅಭಿಪ್ರಾಯವನ್ನೂ ಸಹ ತಿಳಿಸುತ್ತಾರೆ. ಇದೆಲ್ಲ ಆದಮೇಲೆ ಬೆಲೆಯನ್ನು ನಿಗದಿಮಾಡ ತಕ್ಕಂಥದ್ದು.

ಶ್ರೀ ಎಚ್. ಡಿ. ಚೌಡಯ್ಯ.—ಅಗ್ರಿಕಲ್ಚರ್ ಪ್ರೈಸ್ ಕಮಿಷನ್ ರಚನೆ ಏನಿದೆ ಅದು ಕಾಂಪೊಸಿಷನ್ ಸರಿಯಿಲ್ಲ ಎಷ್ಟುತಕ್ಕಂಥ ವಾದ ಇರುತ್ತದೆ. ಬಹಳ ದಿವಸಗಳಿಂದಲೂ, ಅಂದರೆ ಹತ್ತಾರು ವರ್ಷಗಳಿಂದಲೂ ಇದೆ. ನಮ್ಮ ಸರ್ಕಾರದವರು ಏನಾದರೂ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಸಮಾಲೋಚನೆ ನಡೆಸಿ ಇದರ ಕಾಂಪೊಸಿಷನ್ ಬದಲಿಸಬೇಕು. ಯಾರಾದರೂ ಫೀಲ್ಡ್‌ನಿಂದ ಬಂದಿರೆ ತಕ್ಕಂಥ ರೈತರು, ಅದರ ಕಸ್ಟಸುಖ ಗೊತ್ತಿರತಕ್ಕಂಥ ರೈತರು ಅದರ ಪ್ರತಿನಿಧಿಯಾಗಿ ಇರಲು ಏನಾದರೂ ವ್ಯವಸ್ಥೆಮಾಡಲು ಯೋಚನೆ ಮಾಡಿದ್ದೀರಾ ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದರಬಗ್ಗೆ ಎಷ್ಟೋಬಾರಿ ತಿಳಿಸಿದ್ದೇವೆ. ಮುಂದೆಯೂ ಸಹ ತಿಳಿಸಲಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ತಾವು ಖರ್ಚಿನ ಲೆಕ್ಕವನ್ನು ಕೊಟ್ಟಿದ್ದೀರಿ. ಅದರಲ್ಲಿ ಕಬ್ಬಿನ ಬಗ್ಗೆ ೧೯೭೮-೭೯ರಲ್ಲಿ ಕೊಟ್ಟಿಲ್ಲ ೧೯೭೯-೮೦ರಲ್ಲಿ ಕಬ್ಬು ೯,೪೭೫-೫೭ ಪೈಸೆ ಎಂದು ಹೇಳಿದಿರಿ. ಒಟ್ಟು ಖರ್ಚು ನಿರ್ದಿಷ್ಟವಾದ ಮೊತ್ತವನ್ನು ಕೊಟ್ಟಿದ್ದೀರಿ. ಆದರೆ ಫರ್ಟಿಲೈಸರ್ಸ್ ಮತ್ತೆ ಇನ್ನಿತರ ಇನ್‌ಪುಟ್ಸ್ ವ್ಯವಸಾಯಕ್ಕೆ ಬೇಕಾದ ವಸ್ತುಗಳ ಬೆಲೆ ಎರಡು ವರ್ಷಗಳಿಂದ ಜಾಸ್ತಿಯಾಗಿರುವ ಕಾರಣದಿಂದಾಗಿ ಇಷ್ಟೊಂದು ಖರ್ಚು ಬರಲಿಕ್ಕೆ ಕಾರಣವಾಗಿರುತ್ತದೆ. ಇದನ್ನು ಅಂಕಿಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಈ ಬೆಲೆಗಳನ್ನು ನಿಗದಿಮಾಡುವಾಗ ರೈತರಿಗೆ ಸಹಾಯವಾಗುವಂತೆ ಆದಷ್ಟು ಇನ್‌ಪುಟ್ಸ್‌ಗಳ ಬೆಲೆ ಕಡಿಮೆ ಮಾಡುವುದಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ. ಬೆಲೆಗಳು ಸಹಾ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ರೀಯಾಯತಿ ಕೊಡುತ್ತಿದ್ದೇವೆ. ಅವಶ್ಯಕ್ಕೋಸ್ಕರವಾಗಿ ಎಲ್ಲ ಇನ್‌ಪುಟ್ಸ್‌ಗಳ ಬೆಲೆಯನ್ನು ಕಡಿಮೆ ಮಾಡುವುದರ ಜೊತೆಗೆ ಇತರ ಸೌಲಭ್ಯಗಳನ್ನು ಕೂಡ ಕೊಡುವುದರ ಬಗ್ಗೆ ರಾಜ್ಯ ಸರ್ಕಾರದವರು ಸಾಕಷ್ಟು ಗಮನವನ್ನು ಕೊಡುತ್ತಿದೆ.

Construction of Bus Depot at Sindgi

993 SRI M. H. BEKINALKAR (Sindgi).—Will the Minister for Transport and Minor Irrigation be pleased to state.—

(a) whether Government have received any proposal from the Member of Legislative Assembly representing Sindgi constituency for setting up a KSRTC Depot at Sindgi ;

(b) number of buses plying through Sindgi ;

(c) number of Inter-State and Inter-District buses plying over the same ;

(d) when the Depot is going to be established ?

SRI M. M. J. SADYOJATHA (Minister for Transport and Minor Irrigation).—

(a) No.

(b) 89 Buses

(c)—

Inter	State	...	3 Buses
Inter	District	...	27 Buses

(d) The position does not warrant establishment of a depot at Sindgi.

ಅಧ್ಯಕ್ಷರು.—ಪ್ರಶ್ನೆ ನಂ. ೬೪೩ ಶ್ರೀ ಮಲ್ಲಾರಗೌಡ ಎಸ್ ಪಾಟೀಲ್, ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಶ್ರೀ ಎಂ.ಹೆಚ್.ಬೆಕ್ಕಿನಾಳ್ಕರ್. ಸಿಂಧಗಿಯಲ್ಲಿ ಬಸ್ಸು ಡಿಪೋವಿನ ನಿರ್ಮಾಣದ ಬಗ್ಗೆ ಏನಾದರೂ ಮನವಿಗಳು ಬಂದಿವೆಯೆ ? ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಮೂರು ಮನವಿಗಳನ್ನು ನಾನೇ ಕೊಟ್ಟಿದ್ದೇನೆ. ಛೇರ್ಮನ್ ಕಡೆಯಿಂದ ನಮಗೆ ಉತ್ತರ ಬಂದಿದೆ. ತಮ್ಮ ಉತ್ತರವನ್ನು ನೋಡಿ ಮನಸ್ಸಿಗೆ ಖೇದವಾಗುತ್ತಿದೆ. ಇದರ ಬಗ್ಗೆ ಎಕ್ಸಾಮಿನ್ ಮಾಡುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅಲ್ಲಿ ಡಿಪೋ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಎಂ.ಎಚ್. ಬೆಕ್ಕಿನಾಳ್ಕರ್.—ಸಿಂಧಗಿ ಮತ್ತು ಇಂಡಿ ಇಲ್ಲಿಗೆ ಪ್ರತಿದಿನ ೮-೧೦ ಬಸ್ಸುಗಳು ಓಡಾಡುತ್ತವೆ. ಅಲ್ಲಿಗಾದರೂ ಬಸ್ ಡಿಪೋ ನಿರ್ಮಾಣ ಮಾಡುವ ಕ್ರಮ ತೆಗೆದು ಕೊಳ್ಳುತ್ತೀರಾ

ಶ್ರೀ ಎಂ.ಎಂ ಜೆ. ಸದ್ಯೋಜಾತ. —ಸಿಂಧಗಿ ಮತ್ತು ಇಂಡಿಗೆ ೫೪ ಕಿಲೋಮಿಟರ್ ಇರುವುದರಿಂದ ಅಲ್ಲಿಗೆ ಡಿಪೋ ಕೊಡಲಿಕ್ಕೆ ಸಾಧ್ಯವಿಲ್ಲ.

Fishing rights of Cauvery river

467 SRI G. RAJUGOWDA (Hanur).—Will the Minister of State for Fisheries and Ports be pleased to state.—

(a) whether it has come to the notice of Government that the income of Government has been curtailed for not giving the fishing rights to any body either on action or on lease, though there are plenty of fishes available in Hogenakal river of Kollegal Taluk, if so, the reasons therefor;

(b) whether it has come to the notice of Government that the people of Tamilandu are fishing daily and thereby earning by illegal means ?

SRI D.B. PAWAR (Minister of State for Fisheries and Ports).—

(a) The fishing rights of Cauvery river from Mekedatu near Kanakapura upto Hogenakal in Kollegal Taluk has not been given to anybody either on auction or on lease basis for the present.